## ಮೈಸೂರು ವಿಶ್ವವಿದ್ಯಾನಿಲಯ

Estd 1916

(Re-accredited by NAAC with CGPA 3.47 on four point scale with A Grade)

ಸಂಖ್ಯೆ: ಪವಿ/8.6/07/ಅಧಿಸೂಚನೆ/2015-16

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005
**ದಿನಾಂಕ: 21-01-2021.**

### ಅ ಧಿ ಸೂ ಚ ನೆ

ವಿಷಯ: ಮಾರ್ಚ್ **2021**ರಲ್ಲಿ ಜರುಗುವ **3** ಮತ್ತು **5**ನೇ ಸೆಮಿಸ್ಟರ್‌ನ ಸ್ನಾತಕ ಪದವಿ ಪರೀಕ್ಷೆಯ ಬಗ್ಗೆ.

ಉಲ್ಲೇಖ:
1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/34/1990-91, ದಿನಾಂಕ:10-01-2007.
2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/34/1990-91, ದಿನಾಂಕ:02-01-2020.
3. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಪರಿಷ್ಕೃತ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/363/2020-21, ದಿನಾಂಕ:01-09-2020.
4. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಆದೇಶ ಸಂಖ್ಯೆ:ಎಸಿ2(ಎಸ್)/363/2020, ದಿನಾಂಕ:30-11-2020.
5. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ7(ಎ)/456/2016-17, ದಿನಾಂಕ:19-12-2020.

*****

ಮಾರ್ಚ್ **2021**ರ ಮಾಹೆಯಲ್ಲಿ ನಡೆಯಲಿರುವ 3 ಮತ್ತು 5ನೇ ಸೆಮಿಸ್ಟರ್‌ನ (CBCS-Freshers & Repeaters) ಹಾಗೂ 3 ಮತ್ತು 5ನೇ ಸೆಮಿಸ್ಟರ್‌ನ (Non CBCS-Repeaters) ಪದವಿ ಪರೀಕ್ಷೆಗಳಾದ ಬಿ.ಎ., ಬಿ.ಎಸ್ಸಿ., ಬಿ.ಪಿ.ಎ., ಬಿ.ಎ., (Fine Arts), ಬಿ.ವಿ.ಎ., (Visual Arts)/ಬಿ.ಎಫ್.ಎ., ಕಾವಾ (CAVA), ಬಿ.ಕಾಂ., ಬಿ.ಬಿ.ಎಂ./ಬಿ.ಬಿ.ಎ., ಬಿ.ಎಸ್.ಡಬ್ಲ್ಯೂ., ಬಿ.ಬಿ.ಎ., (T&T)/ಬಿ.ಬಿ.ಎ., (T&H), ಬಿ.ಟಿ.ಹೆಚ್/ಬಿ.ಬಿ.ಎ., (THM & TTM), ಬಿ.ಎಸ್ಸಿ., (ವಾಕ್ ಮತ್ತು ಶ್ರವಣ) ಬಿ.ಎಸ್ಸಿ.ಇಡಿ.,(H & I), ಮತ್ತು ಬಿ.ಸಿ.ಎ. ಪರೀಕ್ಷೆಗಳು **ದಿ:03-03-2021**ರಿಂದ ಪ್ರಾರಂಭವಾಗಲಿದೆ, ಇದರ ವಿವರಗಳು ಕೆಳಕಂಡಂತಿರುತ್ತದೆ:

| ಕ್ರ.ಸಂ | ವಿವರುಗಳು | ಅಂತಿಮ ದಿನಾಂಕ |
|---|---|---|
| 1 | ಪರೀಕ್ಷಾ ಶುಲ್ಕ ಪಾವತಿಸಲು ಮತ್ತು ಭರ್ತಿಮಾಡಿದ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು | **13.02.2021** |
| 2 | ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನವರು ಭರ್ತಿ ಮಾಡಲು | **18.02.2021** |
| 3 | ಪರೀಕ್ಷಾ ಶುಲ್ಕವನ್ನು ಚಲನ್ ಮೂಲಕ ಪರೀಕ್ಷಾ ಖಾತೆಗೆ **ಪರೀಕ್ಷಾ ಖಾತೆ ಸಂಖ್ಯೆ: 54007591200 (Examination Account)** SBI, University Campus, Mysuru ಇವರಿಗೆ ಪಾವತಿಸಿ, ಚಲನ್ ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು | **20.02.2021** |
| 4 | ಪ್ರವೇಶ ಪತ್ರಗಳ ಮುದ್ರಣದ ನಂತರ ವಿಶ್ವವಿದ್ಯಾನಿಲಯದ ಅನುಮೋದನೆ ಪಡೆಯಲು [ಆನ್‌ಲೈನ್ ಮೂಲಕ ಅಭ್ಯರ್ಥನಾ ಪಟ್ಟಿಯನ್ನು ಮುದ್ರಿಸಿ ಪ್ರಾಂಶುಪಾಲರ ಸಹಿ ಪಡೆದು ಒಂದು ಪ್ರತಿಯನ್ನು ಪ್ರವೇಶ ಪತ್ರಗಳ ಜೊತೆಯಲ್ಲಿ ಕುಲಸಚಿವ (ಪರೀಕ್ಷಾಂಗ) ಅವರಿಗೆ ಸಲ್ಲಿಸಬೇಕು] | **25.02.2021** |
| 5 | ಆನ್‌ಲೈನ್ ಮೂಲಕ **$C_1$ & $C_2$** (continuous assessment) ಅಂಕಗಳನ್ನು ನಮೂದಿಸಲು | **23.02.2021** |

| | | |
|---|---|---|
| 6 | $C_1$ & $C_2$ (continuous assessment) ಅಂಕಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ದಿನಾಂಕ (UG-ಸಿಬಿಸಿಎಸ್ ನಿಯಮಾವಳಿಗಳ ಪ್ರಕಾರ ಕಲಂ 13ರ ರೀತ್ಯಾ ಕಾಲೇಜಿನವರು ಕ್ರಮವಹಿಸುವುದು) | **26.02.2021** |
| 7 | ವಿದ್ಯಾರ್ಥಿಗಳು ಅಂಕಗಳನ್ನು ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ತಿದ್ದುಪಡಿ ಇದ್ದಲ್ಲಿ ಪ್ರಾಂಶುಪಾಲರುಗಳು ಲಿಖಿತ ಮೂಲಕ ಅವುಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅಂತಿಮ ದಿನಾಂಕ | **ಮುಂದೆ ತಿಳಿಸಲಾಗುವುದು** |
| 8 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **03–03–2021** |

**ಸೂಚನೆಗಳು:**

1. ಪರೀಕ್ಷಾ ಅರ್ಜಿಯು **PDF Mode** ನಲ್ಲಿದ್ದು ವಿದ್ಯಾರ್ಥಿ ಪೋರ್ಟ್‌ಲ್, ಕಾಲೇಜ್ ಪೋರ್ಟ್‌ಲ್ ಮತ್ತು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಲಭ್ಯವಿದ್ದು, ವಿದ್ಯಾರ್ಥಿಗಳು ಸದರಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.

2. **2014ರ ಹಿಂದಿನ ಸಾಲಿನ ವಿದ್ಯಾರ್ಥಿಗಳು ಮಾತ್ರ ಭೌತಿಕ ಅರ್ಜಿಗಳನ್ನು ಕಾಲೇಜಿನಿಂದ ಪಡೆದು ಭರ್ತಿ ಮಾಡಿ ಕಾಲೇಜಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕು. ಕಾಲೇಜಿನವರು ಈ ವಿದ್ಯಾರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ, ಕುಲಸಚಿವರು(ಪರೀಕ್ಷಾಂಗ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿಗೆ ಸಲ್ಲಿಸಬೇಕು.**

3. **Covid-19** ಹಿನ್ನೆಲೆ ಹಾಗೂ ಸಮಯದ ಅಭಾವವಿರುವುದರಿಂದ ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳು ಆರಂಭವಾಗುವ ಮುನ್ನ ಹಾಗೂ ಪೂರ್ಣಗೊಂಡ ನಂತರ, [ಕಾಲೇಜು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಇದೊಂದು ಬಾರಿಗೆ ವ್ಯವಸ್ಥೆ ಮಾಡಿಕೊಂಡು] ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಅನುಮತಿ ನೀಡಲಾಗಿದೆ. ಸದರಿ ಪರೀಕ್ಷೆಗೆ ಬಾಹ್ಯ ಪರೀಕ್ಷಕರು (**External Examiners**) ಲಭ್ಯವಾಗದ ಸಂದರ್ಭದಲ್ಲಿ ಆಂತರಿಕ ಪರೀಕ್ಷಕರನ್ನೇ ಬಳಸಿಕೊಂಡು ಪರೀಕ್ಷೆ ನಡೆಸುವುದು (**Internal Examiners).**

4. ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಆ ದಿನದಂದೇ **Online** ಮುಖಾಂತರ ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಅಂಕಗಳ ಮೂಲಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.

ಎಲ್ಲಾ ಪದವಿ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನ ಇಂಟರ್‌ನೆಟ್ ಸೌಲಭ್ಯವನ್ನು ಬಳಸಿ ನೇರವಾಗಿ ವಿಶ್ವವಿದ್ಯಾನಿಲಯದ **Web Server**ಗೆ ಮಾಹಿತಿಯನ್ನು ವರ್ಗಾವಣೆ (**Online Transmission**) ಮಾಡುವಂತೆ/ ನಮೂದಿಸುವಂತೆ ತಿಳಿಸಲಾಗಿದೆ. ಅನಿವಾರ್ಯ ಕಾರಣದಿಂದಾಗಿ ಕಾಲೇಜಿನಲ್ಲಿ ಇಂಟರ್‌ನೆಟ್ ಸೌಲಭ್ಯವಿಲ್ಲದಿದ್ದ ಪಕ್ಷದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಯಾವುದೇ ಕಂಪ್ಯೂಟರ್ ಕೇಂದ್ರದಿಂದಲೂ ಮಾಹಿತಿ ರವಾನಿಸಬಹುದಾಗಿದೆ.

**ಪರೀಕ್ಷಾ ಶುಲ್ಕಗಳ ದರಗಳು**

(ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ.320/– ಗಳನ್ನು ಕಡ್ಡಾಯವಾಗಿ ಪಾವತಿಸಬೇಕು)

| Sl. No. | Programme/Course | CBCS Freshers (Fee 50%) | CBCS/ Non-CBCS Repeaters (Fee 100%) |
|---|---|---|---|
| 1. | **B.A./B.P.A./B.A. (Fine Arts) B.V.A/B.Com :** | | |
| | a) III Semester whole Examination | **Rs.440/-** | **Rs.880/-** |
| | Per paper with Practical | **Rs.290/-** | **Rs.570/-** |
| | Per paper without Practical/Skill Development | **Rs.220/-** | **Rs.440/-** |
| | b) V Semester whole Examination | **Rs.530/-** | **Rs.1060/-** |
| | Per paper with Practical | **Rs.290/-** | **Rs.570/-** |
| | Per paper without Practical | **Rs.220/-** | **Rs.440/-** |

| | | | |
|---|---|---|---|
| 2. | **B.Sc./BCA/B.Sc. in Family & Community Science:**<br>a) III Semester whole Examination<br>Per paper with Practical<br>Per paper without Practical<br><br>b) V Semester whole Examination<br>Per paper with Practical<br>Per paper without Practical | Rs.500/-<br>Rs.290/-<br>Rs.220/-<br><br>Rs.550/-<br>Rs.290/-<br>Rs.220/- | Rs.990/-<br>Rs.570/-<br>Rs.440/-<br><br>Rs.1,100/-<br>Rs.570/-<br>Rs.440/- |
| 3. | **B.B.A/B.B.M./B.S.W./B.Sc.(Speech & Hearing) & B.Sc.Ed (H & I) :**<br>a) III & V Semester Whole Examination (per semester)<br>Per paper with Practical<br>Per paper without Practical<br>BASLP (Internship fee for 4th year)<br><br>**B.B.A (T&H)/B.B.A(T&T)/B.T.H./B.B.A.(T.H.M) :**<br>a) III & V Semester Whole Examination (per semester)<br>Per paper with Practical<br>Per paper without Practical | Rs.650/-<br><br>Rs.390/-<br>Rs.220/-<br>Rs.1,000/-<br><br><br>Rs.1,250/-<br>Rs.390/-<br>Rs.220/- | Rs.1,300/-<br><br>Rs.770/-<br>Rs.440/-<br>Rs.2,000/-<br><br><br>Rs.2,500/-<br>Rs.770/-<br>Rs.440/- |

***Subject to a maximum of whole examination Fee fixed per semester***

**NOTE:** For Science subjects in Semester Scheme, if a candidate is declared exempted for any Practical examination, Examination fee for such candidate is same as that of per paper without Practical/Skill Development.

**ಸೂಚನೆಗಳು:**

1. ಉಲ್ಲೇಖ 01ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ 2014ನೇ ಸಾಲಿನಲ್ಲಿ ದಾಖಲಾಗಿದ್ದ ವಿದ್ಯಾರ್ಥಿಗಳು ತಮ್ಮ ಪದವಿಯ ಎರಡು ಪಟ್ಟು ಅವಧಿಯ ನಂತರ ಪರೀಕ್ಷೆ ತೆಗೆದುಕೊಳ್ಳುವ **Odd Semester** ವಿದ್ಯಾರ್ಥಿಗಳಿಗೆ ಈ ಪರೀಕ್ಷೆಯು ಮೊದಲ ಪ್ರಯತ್ನವಾಗಿರುತ್ತದೆ. ಈ ಸೌಲಭ್ಯ ಪಡೆಯುವಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವು ಎರಡುಪಟ್ಟು ಜಾಸ್ತಿ ಇರುತ್ತದೆ. ಆದರೆ ಗರಿಷ್ಠ ಮಿತಿ ಇರುವುದಿಲ್ಲ.
2. ಉಲ್ಲೇಖ 04ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ ವಿವಿಧ ಪದವಿ ಕೋರ್ಸ್‌ಗಳ ಎರಡು ಪಟ್ಟು ಅವಧಿ ಮುಗಿದ ನಂತರ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ (2004 ರಿಂದ 2013ರ ಅವಧಿಯಲ್ಲಿ ಪ್ರವೇಶ ಪಡೆದವರಿಗೆ ಮಾತ್ರ) ಪುನ: ಪರೀಕ್ಷೆ ಬರೆಯಲು ಅಂತಿಮ ಅವಕಾಶ ನೀಡಲಾಗಿದೆ. ಈ ಹೆಚ್ಚುವರಿ ಅವಕಾಶದ ಸೌಲಭ್ಯ ಪಡೆಯುವಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವು ನಾಲ್ಕುಪಟ್ಟು ಹೆಚ್ಚಾಗಿರುತ್ತದೆ. ಪರೀಕ್ಷಾ ಶುಲ್ಕ ಪಾವತಿ ಮಾಡಲು ಕಡೆಯ ದಿನಾಂಕ ಈ ಅಧಿಸೂಚನೆಯಲ್ಲಿ ತಿಳಿಸಿರುವ ದಿನಾಂಕವೇ ಆಗಿರುತ್ತದೆ.
3. ಉಲ್ಲೇಖ 05ರ ವಿಶ್ವವಿದ್ಯಾನಿಲಯದ ಆದೇಶದಂತೆ 3 ಮತ್ತು 5ನೇ ಸೆಮಿಸ್ಟರ್‌ನ (CBCS Freshers) ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ 50% ರಿಯಾಯಿತಿ ನೀಡಿದ್ದು, ಈ ರಿಯಾಯಿತಿಯು ಈ ಬಾರಿಯ ಪರೀಕ್ಷೆಗೆ ಮಾತ್ರ ಅನ್ವಯವಾಗುತ್ತದೆ.
4. ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
5. ಪ್ರತಿಯೊಬ್ಬ ಅಭ್ಯರ್ಥಿಯೂ ಪ್ರತಿಯೊಂದು ಚಾತುರ್ಮಾಸದ ಪರೀಕ್ಷೆಗೆ ಮೇಲೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ.320/-ನ್ನು ಸಹ ಪಾವತಿಸತಕ್ಕದ್ದು. ಪರೀಕ್ಷಾ ಅರ್ಜಿಗೆ ಪ್ರತ್ಯೇಕ ಶುಲ್ಕವಿರುವುದಿಲ್ಲ.

6. ಪ್ರವರ್ಗ–1 ಮತ್ತು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಲು ಅರ್ಹರಾದ ಇತರೆ ವರ್ಗಗಳಿಗೆ (ಸಾಮಾನ್ಯ ವರ್ಗದವರನ್ನು ಒಳಗೊಂಡಂತೆ) ಸೇರಿದ ಅಭ್ಯರ್ಥಿಗಳಿಗೆ ಅವರ ಪೋಷಕರ ವಾರ್ಷಿಕ ವರಮಾನದ ಆಧಾರದ ಮೇಲೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದರೂ, ಅಂತಹ ಅಭ್ಯರ್ಥಿಗಳು ನಿಗದಿಪಡಿಸಿದಂತೆ, ಅಂಕಪಟ್ಟಿ ಶುಲ್ಕ **ರೂ.320/–**ಗಳನ್ನು ಪಾವತಿ ಮಾಡಬೇಕು.
7. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಸುತ್ತೋಲೆ ಸಂಖ್ಯೆ: ವಿಘ/1/9/2013–14, ದಿನಾಂಕ 25.09.2013 ಪ್ರಕಾರ 2013–14 ನೇ ಶೈಕ್ಷಣಿಕ ಸಾಲಿನಿಂದ ಪದವಿ ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ.2.5 ಲಕ್ಷದೊಳಗಿರುವ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ, ಬೋಧನಾ ಶುಲ್ಕ, ಪ್ರಮಾಣ ಪತ್ರ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಅಂತಿಮ ಪದವಿ ಪ್ರಮಾಣ ಪತ್ರದ ಶುಲ್ಕಗಳನ್ನು ಕಟ್ಟಿಸಿಕೊಳ್ಳಬಾರದೆಂದು ಸರ್ಕಾರದ ಆದೇಶವಿರುತ್ತದೆ. ಇದರಂತೆ ಕ್ರಮತೆಗೆದುಕೊಳ್ಳುವುದು.
8. **ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ ಅವರ ಪತ್ರ ಸಂಖ್ಯೆ:ಎಸಿ2/182/92–93 ದಿನಾಂಕ:15–10–1999 ರ ಪತ್ರದಲ್ಲಿ ತಿಳಿಸಿರುವ ರೀತ್ಯಾ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್‌ಗಳ ಪತ್ರಿಕೆಗಳಲ್ಲಿ ಅನುತೀರ್ಣರಾಗಿ ಮತ್ತೆ ಪರೀಕ್ಷೆ ತೆಗೆದುಕೊಂಡಲ್ಲಿ ಅಥವಾ ತಮ್ಮ ಕೋರ್ಸನ್ನು ಮುಗಿಸಿದ ನಂತರ ರಿಪೀಟರ್ಸ್ ಆಗಿ ಪರೀಕ್ಷೆಗಳನ್ನು ತೆಗೆದುಕೊಂಡಲ್ಲಿ, ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ತಪ್ಪದೆ ವಸೂಲು ಮಾಡಬೇಕೆಂದು ತಿಳಿಸಲಾಗಿದೆ. ಆದುದರಿಂದ ಇಂತಹ ವಿದ್ಯಾರ್ಥಿಗಳು ಶುಲ್ಕವನ್ನು ತಪ್ಪದೆ ಪಾವತಿಸುವುದು.**
9. **ಪಾವತಿಸಬೇಕಾದ ಒಟ್ಟು ಶುಲ್ಕವನ್ನು ಪರೀಕ್ಷಾ ಖಾತೆ ಸಂಖ್ಯೆ: 54007591200 (Examination Account) ಗೆ DD ಮೂಲಕ Finance Officer, University of Mysore, Mysuru ಇವರ ಹೆಸರಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಶಾಖೆ, ಮೈಸೂರು ಇಲ್ಲಿ ಸಂದಾಯ ಮಾಡಿ ಮೂಲ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.**
10. ಅಭ್ಯರ್ಥಿಗಳಿಂದ ನಗದಾಗಿ ಪಡೆದ ಒಟ್ಟು ಶುಲ್ಕಕ್ಕೆ ಮೇಲೆ ತಿಳಿಸಿರುವ ದಿನಾಂಕದೊಳಗಾಗಿ ನಗದು/ಡಿಡಿ ಮೂಲಕ ಹಣ ಸಂದಾಯ ಮಾಡಿ ಚಲನ್‌ನ ಪ್ರತಿಯನ್ನು ಕುಲಸಚಿವ (ಪರೀಕ್ಷಾಂಗ) ಇವರಿಗೆ ಕಳುಹಿಸುವ ಜವಾಬ್ದಾರಿ ಕಾಲೇಜಿನ ಪ್ರಾಂಶುಪಾಲರಿಗೆ ಇರುತ್ತದೆ.
11. ವಿಶ್ವವಿದ್ಯಾನಿಲಯಕ್ಕೆ ಹಣ ಸಂದಾಯಮಾಡುವ ಸಂದರ್ಭದಲ್ಲಿ ಚಲನ್‌ನಲ್ಲಿ ಪ್ರತಿ ಪದವಿಯ ಸೆಮಿಸ್ಟರ್‌ವಾರು ಅಂಕಪಟ್ಟಿ ಶುಲ್ಕ, ಪರೀಕ್ಷಾ ಶುಲ್ಕ ಮತ್ತು ಪದವಿ ಪ್ರಮಾಣಪತ್ರ ಶುಲ್ಕವನ್ನು ಪ್ರತ್ಯೇಕವಾಗಿ ನಮೂದಿಸಿ ವಿವರಣೆಯೊಂದಿಗೆ ಸಲ್ಲಿಸಬೇಕು.
12. ಅಭ್ಯರ್ಥನಾ ಪಟ್ಟಿಯ ಪ್ರತಿಪುಟದಲ್ಲಿ ಒಟ್ಟಾರೆ ಶುಲ್ಕವನ್ನು ಕ್ರೋಢೀಕರಿಸಿ ಅದನ್ನು ಮುಂದಿನ ಪುಟಕ್ಕೆ ಮುಂದುವರೆಸಿ ಕೊನೆಪುಟದಲ್ಲಿ ಒಟ್ಟಾರೆ ಸಂದಾಯವಾಗಬೇಕಿರುವ ಶುಲ್ಕವನ್ನು ನಮೂದಿಸಬೇಕು.
13. **ಜೋಡಣೆ (Tag) ಮಾಡಿರುವ ಪರೀಕ್ಷಾ ಕೇಂದ್ರಗಳನ್ನು ಹೊರತುಪಡಿಸಿ ಆಯಾಯಾ ಕಾಲೇಜುಗಳನ್ನೇ ಪರೀಕ್ಷಾ ಕೇಂದ್ರವನ್ನಾಗಿ ನಿಗದಿಪಡಿಸಲಾಗಿದೆ (ಅಡಕ 'ಅ') ಹಾಗೂ ಆಯಾಯಾ ಕಾಲೇಜಿನ ಪ್ರಾಂಶುಪಾಲರನ್ನು ಮುಖ್ಯ ಪರೀಕ್ಷಾ ಅಧೀಕ್ಷಕರನ್ನಾಗಿ ನೇಮಿಸಲಾಗಿದೆ. ಇದಕ್ಕೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದಿಲ್ಲ.**
14. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪೋಷಕರ ಆದಾಯ **ರೂ.2.5 ಲಕ್ಷಗಳು ಮೀರಿದ್ದಲ್ಲಿ ಅವರುಗಳಿಂದ ಪೂರ್ಣ ಪರೀಕ್ಷಾ ಶುಲ್ಕ ಸಂಗ್ರಹಿಸುವುದು.**
15. ಸರ್ಕಾರದ ಅಧೀನ ಕಾರ್ಯದರ್ಶಿ–1, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರ ತಿದ್ದುಪಡಿ ಮತ್ತು ಸೇರ್ಪಡೆ ಆದೇಶ ಸಂಖ್ಯೆ:ಹಿಂವಕ 589 ಬಿಎಂಎಸ್ 2013, ದಿನಾಂಕ 06.08.2014ರ ಸರ್ಕಾರಿ ಆದೇಶದನ್ವಯ ಮತ್ತು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಸುತ್ತೋಲೆ ಸಂಖ್ಯೆ:ಜಿಎಲ್.3/170/2014–15 ದಿನಾಂಕ 13.08.2014 ರಂತೆ ಸರ್ಕಾರಿ ಆದೇಶದನ್ವಯ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ನಿಗದಿತ ಆದಾಯದ ಮಿತಿಯೊಳಗಿರುವ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ತಾವು ಪ್ರವೇಶ ಪಡೆಯುವ ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಸಮಯದಲ್ಲಿ ಸಲ್ಲಿಸಿದ್ದಲ್ಲಿ, ಅಂತಹ ಕಾಲೇಜು/ಶಿಕ್ಷಣ ಸಂಸ್ಥೆಗಳು ಸರ್ಕಾರವು ಕಾಲೇಜುಗಳಿಗೆ ನಿಗದಿಪಡಿಸಿದ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಮತ್ತು ಗ್ರಂಥಾಲಯ ಶುಲ್ಕಗಳನ್ನು ವಸೂಲಿ ಮಾಡದೇ ವಿನಾಯಿತಿ ನೀಡಿ ಪ್ರವೇಶಾತಿ ನೀಡುವುದು. ನಂತರ ವಿನಾಯಿತಿ ನೀಡಿರುವ ಶುಲ್ಕಗಳನ್ನು ಮರುಪಾವತಿಸುವಂತೆ ಸಂಬಂಧಪಟ್ಟ ಕಾಲೇಜು/ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಮೂಲಕ ವಿದ್ಯಾರ್ಥಿಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಿ, ಕ್ರೂಢೀಕೃತ ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಶುಲ್ಕ ವಿನಾಯಿತಿ ಮಂಜೂರಾತಿ ಪ್ರಾಧಿಕಾರಿಗಳಿಗೆ ಸಲ್ಲಿಸುವುದು. ಸರ್ಕಾರಿ ಆದೇಶಾನುಸಾರ ಶುಲ್ಕ ವಿನಾಯಿತಿ ನೀಡಿರುವ ವಿದ್ಯಾರ್ಥಿಗಳ ಮರುಭರಿಕೆ ಶುಲ್ಕಗಳನ್ನು ಸಂಬಂಧಿಸಿದ ಇಲಾಖೆಯಿಂದ ನಿಗದಿತ ಅವಧಿಯೊಳಗೆ ಮರುಭರಿಕೆ ಮಾಡಿಕೊಳ್ಳುವುದು ಸಂಬಂಧಿಸಿದ ಬಟವಾಡೆ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

## ಪರೀಕ್ಷಾ ಶುಲ್ಕಗಳ ದರಗಳು

(ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ.320/- ಗಳನ್ನು ಕಡ್ಡಾಯವಾಗಿ ಪಾವತಿಸಬೇಕು)

| Sl. No. | Programme/Course | ಎರಡು ಪಟ್ಟು ಪರೀಕ್ಷಾ ಶುಲ್ಕ ಪಾವತಿಯ ವಿವರ (ರೂ.ಗಳಲ್ಲಿ) | ನಾಲ್ಕು ಪಟ್ಟು ಪರೀಕ್ಷಾ ಶುಲ್ಕ ಪಾವತಿಯ ವಿವರ (ರೂ.ಗಳಲ್ಲಿ) |
|---|---|---|---|
| 1. | **B.A./B.P.A./B.A. (Fine Arts) B.V.A/B.Com :** | | |
| | a) III Semester whole Examination | Rs.1,760/- | Rs.3,520/- |
| | Per paper with Practical | Rs.1,140/- | Rs.2,280/- |
| | Per paper without Practical/Skill Development | Rs.880/- | Rs.1,760/- |
| | b) V Semester whole Examination | Rs.2,120/- | Rs.4,240/- |
| | Per paper with Practical | Rs.1,140/- | Rs.2,280/- |
| | Per paper without Practical | Rs.880/- | Rs.1,760/- |
| 2. | **B.Sc./BCA/B.Sc. in Family & Community Science:** | | |
| | a) III Semester whole Examination | Rs.1,980/- | Rs.3,960/- |
| | Per paper with Practical | Rs.1,140/- | Rs.2,280/- |
| | Per paper without Practical | Rs.880/- | Rs.1,760/- |
| | b) V Semester whole Examination | Rs.2,200/- | Rs.4,400/- |
| | Per paper with Practical | Rs.1,140/- | Rs.2,280/- |
| | Per paper without Practical | Rs.880/- | Rs.1,760/- |
| 3. | **B.B.A/B.B.M./B.S.W./B.Sc.(Speech & Hearing) & B.Sc.Ed (H & I) :** | | |
| | a) III & V Semester Whole Examination (per semester) | Rs.2,600/- | Rs.5,200/- |
| | Per paper with Practical | Rs.1,540/- | Rs.3,080/- |
| | Per paper without Practical | Rs.880/- | Rs.1,760/- |
| | BASLP (Internship fee for 4th year) | Rs.4,000/- | Rs.8,000/- |
| | **B.B.A (T&H)/B.B.A(T&T)/B.T.H./B.B.A.(T.H.M) :** | | |
| | a) III & V Semester Whole Examination (per semester) | Rs.5,000/- | Rs.10,000/- |
| | Per paper with Practical | Rs.1,540/- | Rs.3,080/- |
| | Per paper without Practical | Rs.880/- | Rs.1,760/- |

**ವಿಶೇಷ ಸೂಚನೆಗಳು:**

1. ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆಯಾಯ ಕಾಲೇಜಿನವರು ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಸಾಕಷ್ಟು ಮುಂಚಿತವಾಗಿ online ಮೂಲಕ ಪಡೆದು, ಕುಲಸಚಿವರು (ಪರೀಕ್ಷಾಂಗ) ಇವರ ಯಥಾಪ್ರತಿ (Facsimile) ಹಾಕಿಸಿಕೊಳ್ಳಬೇಕು ಮತ್ತು ಕುಲಸಚಿವ(ಪ) ಅವರ ಯಥಾಪ್ರತಿ (Facsimile) ಇಲ್ಲದೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸಕೂಡದು.

2. ಪರೀಕ್ಷಾ ಶುಲ್ಕವನ್ನು ಪಾವತಿಸಲು ಸಾಕಷ್ಟು ಕಾಲಾವಕಾಶ ನೀಡಿರುವುದರಿಂದ ವಿದ್ಯಾರ್ಥಿಗಳಿಗೆ ಸೂಕ್ತ ತಿಳುವಳಿಕೆ ನೀಡಿ, ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ಶುಲ್ಕ ಪಾವತಿಸಲು ಹೆಚ್ಚುವರಿ ಕಾಲಾವಕಾಶ ನೀಡಲಾಗುವುದಿಲ್ಲ.
3. ಎರಡನೇ ಚತುರ್ಮಾಸದ ಸಿಬಿಸಿಎಸ್ ಸ್ಕೀಂನ ಎಲ್ಲಾ ಪದವಿಗಳಿಗೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆ ಕೋಡ್‌ಗಳನ್ನು ಆಯಾ ಕಾಲೇಜಿನ ಆನ್‌ಲೈನ್ ಮುಖಾಂತರ ಪಡೆಯಬಹುದಾಗಿದೆ. ಸರಿಯಾದ ಪ್ರಶ್ನೆಪತ್ರಿಕೆ ಕೋಡ್‌ಗಳನ್ನು ಕಾಲೇಜಿನವರು ವಿದ್ಯಾರ್ಥಿಗಳ ಗಮನಕ್ಕೆ ತಂದು ಪರೀಕ್ಷಾ ಅರ್ಜಿಯಲ್ಲಿ ವಿದ್ಯಾರ್ಥಿಗಳು ಭರ್ತಿಮಾಡಿರುವುದು ಸರಿಯಿದೆಯೇ ಎಂದು ಪರಿಶೀಲಿಸಿ ನಂತರ ಆನ್‌ಲೈನ್ ಮುಖಾಂತರ ನಮೂದಿಸುವುದು. ಒಂದು ವೇಳೆ ತಪ್ಪಾಗಿ ಕೋಡ್‌ಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ್ದಲ್ಲಿ ಅದಕ್ಕೆ ಕಾಲೇಜಿನವರೇ ಹೊಣೆಗಾರರಾಗಿರುತ್ತಾರೆ.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. Covid-19 ಹಿನ್ನೆಲೆ ಹಾಗೂ ಸಮಯದ ಅಭಾವವಿರುವುದರಿಂದ ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳು ಆರಂಭವಾಗುವ ಮುನ್ನ ಹಾಗೂ ಪೂರ್ಣಗೊಂಡ ನಂತರ, ಕಾಲೇಜು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಇದೊಂದು ಬಾರಿಗೆ ವ್ಯವಸ್ಥೆ ಮಡಿಕೊಂಡು ಪ್ರಾಯೋಗಿಕ ಪರೀಕ್ಷೆಗಳು ನಡೆಸಲು ಅನುಮತಿ ನೀಡಲಾಗಿದೆ. ಪ್ರಾಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದ ವಿವರವಾದ ವೇಳಾಪಟ್ಟಿಯನ್ನು ಸಂಬಂಧಪಟ್ಟ ಕಾಲೇಜಿನ ಮುಖ್ಯ ಪರೀಕ್ಷಾ ಅಧೀಕ್ಷಕರು/ ಕಾಲೇಜು ಪ್ರಾಂಶುಪಾಲರುಗಳು ಪ್ರಕಟಿಸುವರು.
2. ಲಿಖಿತ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿವರವಾದ ವೇಳಾಪಟ್ಟಿಯನ್ನು ಈ ಕಛೇರಿಯಿಂದ ಮುಂದಿನ ದಿನಗಳಲ್ಲಿ ಕಳುಹಿಸಲಾಗುವುದು.
3. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು (ಅನುತ್ತೀರ್ಣರಾಗಿ ಮತ್ತೆ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳೂ ಸಹ ಸೇರಿದಂತೆ) ನಿಗದಿಪಡಿಸಲಾಗಿರುವ ಕೊನೆಯ ದಿನಾಂಕ ಅಥವಾ ಅದಕ್ಕಿಂತ ಮುಂಚಿತವಾಗಿ ತಾವು ವ್ಯಾಸಂಗ ಮಾಡಿರುವ ಕಾಲೇಜುಗಳಲ್ಲಿಯೇ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು ಮತ್ತು ಪರೀಕ್ಷೆಯ ಅಭ್ಯರ್ಥನಾ ಪತ್ರವನ್ನು ಸಹ ಸಲ್ಲಿಸಬೇಕು. ***ವಿಶ್ವವಿದ್ಯಾನಿಲಯಕ್ಕೆ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.***
4. ಪರೀಕ್ಷೆಗಳನ್ನು ಮುಂದೂಡಬೇಕೆಂದು ಬರುವ ಯಾವ ಬಗೆಯ ಮನವಿಯನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲ.
5. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
6. ವಿಳಂಬವಾಗಿ (ಟಿ.ಎ.ಎಲ್) ಫಲಿತಾಂಶ ಪ್ರಕಟವಾಗುವ ವಿದ್ಯಾರ್ಥಿಗಳಿಗೆ ಅವರ ಫಲಿತಾಂಶವು ತಲುಪಿದ ದಿನಾಂಕದಿಂದ 7 ದಿವಸಗಳ ಅವಧಿಯೊಳಗೆ ಯಾವುದೇ ರೀತಿಯ ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು ಅನುಮತಿ ಇರುತ್ತದೆ.
7. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಇತ್ತೀಚಿನ ಭಾವಚಿತ್ರದ ಮೇಲೆ ಪೂರ್ತಿ ಸಹಿ ಮಾಡಿ ವಿದ್ಯಾರ್ಥಿಯನ್ನು ಗುರುತಿಸಲಾಗಿದೆ, ಎಂದು ಬರೆಯಿಸಿ ಪ್ರಾಂಶುಪಾಲರಿಂದ ಸಹಿ ಮಾಡಿಸಿ ಅವರ ಪ್ರವೇಶ ಪತ್ರಿಕೆಗೆ ಅಂಟಿಸಿ ಪರೀಕ್ಷಾ ಅರ್ಜಿಯೊಡನೆ ಕಾಲೇಜಿಗೆ ನೀಡಬೇಕು.
8. **ಭಾವಚಿತ್ರಗಳಿಲ್ಲದ ಹಾಗೂ ಕುಲಸಚಿವರು (ಪರೀಕ್ಷಾಂಗ) ಅಥವಾ ಪ್ರಾಂಶುಪಾಲರ ಸಹಿ/ಮೊಹರು ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಕೇಂದ್ರದ ಪರೀಕ್ಷಾ ಮುಖ್ಯಾಧಿಕಾರಿಗಳು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.**
9. ಎಲ್ಲಾ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯ ಜೊತೆಗೆ ತಾವು ಪರೀಕ್ಷೆ ತೆಗೆದುಕೊಂಡಿರುವ ಆಯಾ ಸೆಮಿಸ್ಟರ್/ವರ್ಷಕ್ಕೆ ಸಂಬಂಧಪಟ್ಟ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.

**ಪ್ರಾಂಶುಪಾಲರುಗಳಿಗೆ ಸಾಮಾನ್ಯ ಸೂಚನೆಗಳು:**

1. ಪರೀಕ್ಷಾ ಶುಲ್ಕಗಳನ್ನು ಪಾವತಿಸಲು ಹಾಗೂ ಪರೀಕ್ಷೆ ತೆಗೆದುಕೊಳ್ಳುವುದಕ್ಕೆ ಬೇಕಾಗಿರುವ ಮಾಹಿತಿಯನ್ನು ವಿದ್ಯಾರ್ಥಿಗಳಿಂದ ಪಡೆಯಲು ಖಾಲಿ ಫಾರಂಗಳನ್ನು ಕಳುಹಿಸಲಾಗುವುದು. (ಪರೀಕ್ಷಾ ಅರ್ಜಿ ಫಾರಂಗಳು ನಿಮ್ಮಲ್ಲಿ ಲಭ್ಯವಿದ್ದಲ್ಲಿ ಅವುಗಳನ್ನು ಉಪಯೋಗಿಸಬಹುದು).

2. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಮಾಹಿತಿಯನ್ನು Online ಮೂಲಕ ಎಂಟ್ರಿ ಮಾಡಿದ ನಂತರ ಕಾಲೇಜು ಹಂತದಲ್ಲಿಯೇ ಪ್ರವೇಶ ಪತ್ರಗಳನ್ನು ಮುದ್ರಿಸುವ ವ್ಯವಸ್ಥೆಯನ್ನು ಮಾಡಲಾಗುವುದು. ವಿದ್ಯಾರ್ಥಿಗಳ ಹಾಜರಾತಿ ಮತ್ತು ಪ್ರವೇಶಾತಿ ಅನುಮತಿಯನ್ನು ಪ್ರವೇಶಪತ್ರದಲ್ಲಿ ದೃಢೀಕರಿಸಿದ ನಂತರ ಕುಲಸಚಿವ (ಪರೀಕ್ಷಾಂಗ) ಅವರ ಮೇಲುಸಹಿಗಾಗಿ ಪರೀಕ್ಷೆ ಪ್ರಾರಂಭಕ್ಕಿಂತ ಮುಂಚಿತವಾಗಿ ಕಳುಹಿಸಬೇಕು.
3. ಆನ್‌ಲೈನ್ ಮುಖಾಂತರ ಯಾವುದಾದರೂ ವಿದ್ಯಾರ್ಥಿಗಳ ಮಾಹಿತಿಯನ್ನು ಸಲ್ಲಿಸಲಾಗದೇ ಇದ್ದಲ್ಲಿ ಅಂತಹವರ ಪರೀಕ್ಷಾ ಅರ್ಜಿಗಳನ್ನು (ವಿದ್ಯಾರ್ಥಿ ಮತ್ತು ಪ್ರಾಂಶುಪಾಲರ ಸಹಿ ಹಾಕಿರಬೇಕು) ವಿಶ್ವವಿದ್ಯಾನಿಲಯಕ್ಕೆ **ದಿನಾಂಕ: 16-02-2021**ರೊಳಗೆ ಸಲ್ಲಿಸಿ ಅಪ್‌ಡೇಟ್ ಮಾಡಿಸಿಕೊಳ್ಳಬೇಕು.
4. ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಮೊಹರು ಮಾಡಿದ ಕವರುಗಳಲ್ಲಿ ಇಟ್ಟು ಕೇಂದ್ರದಲ್ಲಿ ನಡೆಯುವ ಎಲ್ಲಾ ವಿಷಯಗಳ ಪ್ರಾಯೋಗಿಕ (ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ಮುನ್ನ) ಪರೀಕ್ಷೆಗಳು ಮುಗಿದ ಮರು ದಿನವೇ ಕಳುಹಿಸಬೇಕು. ಈ ದಿನಾಂಕ ಮೀರಿ ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಕಳುಹಿಸುವಂತಹ ಕಾಲೇಜುಗಳಿಗೆ/ಸಂಸ್ಥೆಗಳಿಗೆ ಸೇರಿದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳು ತಡವಾಗಿ ಪ್ರಕಟವಾಗುವ ಸಂಭವವನ್ನು ತಪ್ಪಿಸಲು ಜಾಗರೂಕರಾಗಿರಲು ಕೋರಲಾಗಿದೆ. ಉತ್ತರ ಪತ್ರಿಕೆಗಳ ಕಟ್ಟುಗಳಲ್ಲಿ (Answer Book Bundles) ಅಂಕಪಟ್ಟಿಗಳನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ. ಅಂಕಪಟ್ಟಿಗಳನ್ನು ತಯಾರಿಸುವಾಗ ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು (Register Number) ಪೂರ್ಣವಾಗಿ ಬರೆಯಬೇಕೆಂಬ ವಿಚಾರವನ್ನು ಎಲ್ಲಾ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಬೇಕು ಹಾಗೂ ಸಂಬಂಧಪಟ್ಟ ಪ್ರಾಯೋಗಿಕ ಪತ್ರಿಕೆಯ ನಿಖರವಾದ ಕೋಡ್ ನಂಬರನ್ನು ತಪ್ಪದೆ ಬರೆಯಬೇಕೆಂಬ ವಿಚಾರವನ್ನು ಸಹ ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಬೇಕು. ಪ್ರಾಯೋಗಿಕ ಪರೀಕ್ಷಕರಿಗೆ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು (Marks List) ಒದಗಿಸುವುದಕ್ಕಿಂತ ಮೊದಲು ಆಯಾಯಾ ಕೇಂದ್ರದ ಮೊಹರನ್ನು (Seal) ಮಾರ್ಕ್ಸ್ ಲಿಸ್ಟ್‌ನ ಕೆಳಗಡೆ ಮಧ್ಯಭಾಗದಲ್ಲಿ ತಪ್ಪದೆ ಹಾಕಬೇಕು.
5. ಸಬ್ಸಿಡಿಯರಿ ಪತ್ರಿಕೆಗಳನ್ನು ಕಾಲೇಜು ಹಂತದಲ್ಲೇ ಮೌಲ್ಯಮಾಪನ ಮಾಡಿಸುವ ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆ. ಆದ್ದರಿಂದ, ಎಲ್ಲಾ ಸಬ್ಸಿಡಿಯರಿ ಪತ್ರಿಕೆಗಳ ಉತ್ತರಪತ್ರಿಕೆಗಳನ್ನು ಸಹ ಪರೀಕ್ಷೆ ಮುಗಿದ ನಂತರ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು. ಅಂದರೆ ಕಾಲೇಜು ಹಂತದಲ್ಲಿ ಯಾವುದೇ ಥಿಯರಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲು ಅವಕಾಶವಿರುವುದಿಲ್ಲ.
6. ವಿದ್ಯಾರ್ಥಿಗಳು ಗೈರುಹಾಜರಾದಲ್ಲಿ ಆ ಪರೀಕ್ಷಾ ದಿನದಂದೇ ಆನ್‌ಲೈನ್ ಮುಖಾಂತರ ಗೈರುಹಾಜರಿಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಕರಡು ಕುಲಸಚಿವ ಪರೀಕ್ಷಾಂಗ)ರವರಿಂದ ಅನುಮೋದಿಸಿದೆ

| ಕರಡು ಕುಲಸಚಿವ ಪರೀಕ್ಷಾಂಗ)ರವರಿಂದ ಅನುಮೋದಿಸಿದೆ |
|---|

K.N. [signature] 21/1/21

ಉಪ ಕುಲಸಚಿವ (ಪರೀಕ್ಷಾಂಗ)

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಮಂಡ್ಯ ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು/ನಿರ್ದೇಶಕರು/ಡೀನರು, ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು/ಜೆ.ಎಸ್.ಎಸ್. ಕಾಲೇಜು ವಾಕ್ ಮತ್ತು ಶ್ರವಣ ಸಂಸ್ಥೆ, ಜೆ.ಎಸ್.ಎಸ್ ಕಾಲೇಜು ಅವರಣ, ಊಟಿ ರಸ್ತೆ, ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಕಾವ) ಸಿದ್ಧಾರ್ಥನಗರ ಮೈಸೂರು.
2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಜಿಲ್ಲಾಧಿಕಾರಿಗಳ ಕಛೇರಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ, ಮೈಸೂರು/ಮಂಡ್ಯ/ಹಾಸನ/ ಚಾಮರಾಜನಗರ ಜಿಲ್ಲೆ.
5. ಜಿಲ್ಲಾ ಖಜಾನಾಧಿಕಾರಿಗಳು,ಮೈಸೂರು/ಮಂಡ್ಯ/ಹಾಸನ/ ಚಾಮರಾಜನಗರ.
6. ಆರಕ್ಷಕ ಅಧೀಕ್ಷಕರು, ಮೈಸೂರು/ಮಂಡ್ಯ/ಹಾಸನ/ ಚಾಮರಾಜನಗರ.
7. ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು
8. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ, ವಾರ್ತಾ ಭವನ, ಎಚ್.ಸಿ.ದಾಸಪ್ಪ ವೃತ್ತ, ಮೈಸೂರು – ಮೇಲ್ಕಂಡ ಪ್ರಕಟಣೆ ಮುಖ್ಯಾಂಶಗಳನ್ನು ಎಲ್ಲಾ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಚಾರ ಮಾಡಲು ಕೋರಿ ಪ್ರತಿ ಕಳುಹಿಸಲಾಗಿದೆ.

9. ನಿರ್ದೇಶಕರು, ಪ್ರಸಾರ ಭಾರತಿ ಕೇಂದ್ರ, ಯಾದವಗಿರಿ, ಮೈಸೂರು – ಈ ಅಧಿಸೂಚನೆಯ ಮುಖ್ಯಾಂಶಗಳನ್ನು ತಮ್ಮ ಬಾನುಲಿ ಹಾಗೂ ಟಿ.ವಿ ವಾಹಿನಿ ಕೇಂದ್ರದಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಾಗೆ ಭಿತ್ತರಿಸಲು ಏರ್ಪಾಟನ್ನು ಮಾಡಲು ಕೋರಿದೆ.
10. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ, ಮಾನಸಗಂಗೋತ್ರಿ, ಮೈಸೂರು 570 006.
11. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಉಪಕುಲಸಚಿವರು (ಶೈಕ್ಷಣಿಕ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
14. ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
15. ವ್ಯವಸ್ಥಾಪಕರು, ಮೆಟಾ–ಐ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
16. ಸಂಯೋಜನಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
17. ಪರೀಕ್ಷಾ ವಿಭಾಗದ ಎಲ್ಲಾ ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
18. ಎಲ್ಲಾ ಕಾರ್ಯನಿರ್ವಾಹಕರು (ಸಾಮಾನ್ಯ ವಿಭಾಗ ಮತ್ತು ಸ್ನಾತಕಪದವಿ ವಿಭಾಗ) ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
19. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿ ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
20. ಕಛೇರಿ ಪ್ರತಿ.